# APRIL 06, 2026

## AKASHAVANI - DHARWAD

## PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ದಾವಣಗೆರೆ ದಕ್ಷಿಣ ಹಾಗೂ** ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ, ಉಪ ಚುನಾವಣೆಯ ಬಹಿರಂಗ ಪ್ರಚಾರ, ನಾಳೆ ಮಂಗಳವಾರ, 7ನೇ ತಾರೀಖು ಅಂತ್ಯವಾಗಲಿದೆ. ಬಹಿರಂಗ ಪ್ರಚಾರ ಅಂತ್ಯಗೊಳ್ಳಲು, ಎರಡು ದಿನಗಳು ಮಾತ್ರ ಬಾಕಿ ಇದ್ದು, ಆಯಾ ಪಕ್ಷಗಳ ಅಭ್ಯರ್ಥಿಗಳ ಪರ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಮುಖಂಡರು ಕ್ಷೇತ್ರಕ್ಕೆ ಆಗಮಿಸಿ, ಚುನಾವಣಾ ಪ್ರಚಾರ ಕೈಗೊಂಡಿದ್ದಾರೆ. ಗುರುವಾರ, 9ನೇ ತಾರೀಖು ಮತದಾನ ನಿಗದಿಯಾಗಿದ್ದು, ಮೇ 4 ರಂದು, ಮತ ಎಣಿಕೆ ನಡೆಯಲಿದೆ.

<><><>

**ದಾವಣಗೆರೆ ಹಾಗೂ ಬಾಗಲಕೋಟೆ ಜಿಲ್ಲಾಡಳಿತಗಳು,** ಚುನಾವಣಾ ಆಯೋಗದ ನಿರ್ದೇಶನದಂತೆ, ವ್ಯಾಪಕ ಪೂರ್ವ ಸಿದ್ಧತೆ ಹಾಗೂ ಬಿಗಿ ರಕ್ಷಣಾ ವ್ಯವಸ್ಥೆ ಕೈಗೊಂಡಿವೆ. ಸಂಪೂರ್ಣ ಪಾರದರ್ಶಕ, ನ್ಯಾಯಯುತ ಹಾಗೂ ನಿರ್ಭೀತಿಯ ಮತದಾನಕ್ಕೆ, ವಿಶೇಷ ಪ್ರಯತ್ನಗಳನ್ನು ಕೈಗೊಂಡಿವೆ. ದಾವಣಗೆರೆ ದಕ್ಷಿಣ ವಿಧಾನಸಭಾ ಉಪ ಚುನಾವಣೆಯಲ್ಲಿ, ಮತದಾನದ ಪ್ರಮಾಣ ಹೆಚ್ಚಿಸಲು ಮತ್ತು ಮತದಾರರನ್ನು ಆಕರ್ಷಿಸಲು, 10 ವಿಶೇ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ ಎಂದು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ತಿಳಿಸಿದ್ದಾರೆ.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸಮರ್ಥ** ನೇತೃತ್ವದಲ್ಲಿ, ಭಾರತ ವಿಕಸನದ ಪಥದಲ್ಲಿ ಮುನ್ನಡೆಯುತ್ತಿದೆ. ಹಳ್ಳಿಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಎಂಬ ಮಂತ್ರದೊಂದಿಗೆ, ಕೇಂದ್ರ ಸರ್ಕಾರ ಗ್ರಾಮೀಣ ಭಾಗದ ಸರ್ವತೋಮುಖ ಅಭಿವೃದ್ಧಿಗೆ ಕಟಿಬದ್ಧವಾಗಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ. ಬಾಗಲಕೋಟೆ ವಿಧಾನಸಭಾ ಕ್ಷೇತ್ರದ, ಉಪ ಚುನಾವಣೆಯಲ್ಲಿ, ಬಿಜೆಪಿ ಅಭ್ಯರ್ಥಿ, ವೀರಣ್ಣ ಚರಂತಿಮಠ ಅವರ ಪರವಾಗಿ, ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಮಾಜಿ ಮುಖ್ಯಮಂತ್ರಿಗಳಾದ ಬಿ. ಎಸ್ ಯಡಿಯೂರಪ್ಪ, ಕೇಂದ್ರ ಸಚಿವರಾದ ಹೆಚ್. ಡಿ ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಜಗದೀಶ ಶೆಟ್ಟರ್, ಸಂಸದ ಬಸವರಾಜ ಬೊಮ್ಮಾಯಿ ಸೇರಿದಂತೆ ಗಣ್ಯರು ಇದ್ದರು.

<><><>

**ಬೆಂಗಳೂರು ನಗರ ಜಿಲ್ಲೆಯಲ್ಲಿ,** ಅಡುಗೆ ಅನಿಲ ದಾಸ್ತಾನು ಸಾಕ ಷ್ಟ ಇದ್ದು, ಯಾವುದೇ ಕೊರತೆ ಇಲ್ಲದಂತೆ ಗ್ರಾಹಕರಿಗೆ ಪೂರೈಸಲಾಗುತ್ತಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ ತಿಳಿಸಿದ್ದಾರೆ. ಆಧಾರ ರಹಿತ ವದಂತಿಗಳು, ಸುವ್ಯವಸ್ಥೆಗೆ ಅಡ್ಡಿಪಡಿಸುವಂತಹ ಹೇಳಿಕೆಗಳಿಗೆ, ಸಾರ್ವಜನಿಕರು ಕಿವಿಗೊಡಬಾರದು ಎಂದು ಮನವಿ ಮಾಡಿದ್ದಾರೆ.

<><><>

**ಗದಗ ನಗರದಲ್ಲಿ ಎಲ್.ಪಿ.ಜಿ** ಅಡುಗೆ ಅನಿಲ ಸಿಲಿಂಡರ್ ಗಳ ಪೂರೈಕೆ ಸಮರ್ಪಕವಾಗಿ ನಡೆಯುತ್ತಿದೆ ಎಂದು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ನಗರದ ಅಡುಗೆ ಅನಿಲ್ ಸಿಲಿಂಡರ್ ವಿತರಕರಾದ ಲಾಲ್ ಸಾಬ್

<><><>

**ಲಾಲ್ ಸಾಬ್ ಧ್ವನಿ– 34 ಸೆಕೆಂದುಗಳು**

<><><>

**ಪಶ್ಚಿಮ ಏಷ್ಯಾ** ಬಿಕ್ಕಟ್ಟಿನ ಮಧ್ಯೆ, ಈ ವರ್ಷದ ಜೂನ್ 30 ರವರೆಗೆ ನಿರ್ಣಾಯಕ ಪೆಟ್ರೋಕೆಮಿಕಲ್ ಉತ್ಪನ್ನಗಳ ಮೇಲೆ ಸಂಪೂರ್ಣ ಕಸ್ಟಮ್ಸ್ ಸುಂಕ ವಿನಾಯಿತಿ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ದೇಶೀಯ ಉದ್ಯಮಕ್ಕೆ ನಿರ್ಣಾಯಕ ಪೆಟ್ರೋಕೆಮಿಕಲ್ ಒಳಹರಿವಿನ ನಿರಂತರ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಹಾಗೂ ದೇಶದಲ್ಲಿ ಪೂರೈಕೆ ಸ್ಥಿರತೆಯನ್ನು ಕಾಪಾಡುವ ನಿಟ್ಟಿನಲ್ಲಿ ಈ ಕ್ರಮವನ್ನು ತಾತ್ಕಾಲಿಕ ಮತ್ತು ಉದ್ದೇಶಿತ ಪರಿಹಾರವಾಗಿ ಕೈಗೊಳ್ಳಲಾಗಿದೆ.

<><><>

**ಕೊಡಗು ಜಿಲ್ಲೆಯ ತಡಿಯಾಂಡಮೋಲ್** ಶಿಖರಕ್ಕೆ, ಚಾರಣಕ್ಕೆ ತೆರಳಿ ನಾಪತ್ತೆಯಾಗಿದ್ದ ಕೇರಳ ಮೂಲದ, ಜಿ.ಎಸ್. ಶರಣ್ಯ ಅವರು ವಿವಿಧ ಇಲಾಖೆಗಳ ಶೋಧಕಾರ್ಯದ ಮೂಲಕ ಪತ್ತೆಯಾಗಿ, ಇದೀಗ ಸುರಕ್ಷಿತವಾಗಿ ಮನೆಗೆ ತೆರಳಿರುವುದು, ಸಂತಸದ ವಿಷಯವಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾರ್ಗದರ್ಶನದಲ್ಲಿ, ಕಾರ್ಯಾಚರಣೆಯಲ್ಲಿ ಭಾಗವಹಿಸಿದ ವಿವಿಧ ಇಲಾಖೆಗಳ ಎಲ್ಲ ಅಧಿಕಾರಿ, ಸಿಬ್ಬಂದಿ ಹಾಗೂ ಸ್ಥಳೀಯ ಬುಡಕಟ್ಟು ಜನರಿಗೆ ಸಚಿವರು ಅಭಿನಂದನೆ ಹಾಗೂ ಧನ್ಯವಾದಗಳನ್ನು ತಿಳಿಸಿದ್ದಾರೆ.

<><><>

**ಉತ್ತರ ಕನ್ನಡ ಜಿಲ್ಲೆಯ** ಒಟ್ಟು ಐದು ತಾಲೂಕುಗಳಲ್ಲಿರುವ ಪ್ರತಿ ಮನೆಗಳಿಗೆ, ಆರೋಗ್ಯ ಕಾರ್ಯಕರ್ತರು ತೆರಳಿ, ಮಂಗನ ಕಾಯಿಲೆ– ಕೆ.ಎಫ್.ಡಿ ಮುಂಜಾಗ್ರತೆ ಕುರಿತು ಕರಪತ್ರಗಳನ್ನು ಹಂಚುತ್ತಿದ್ದಾರೆ ಎಂದು ಕೆ.ಎಫ್.ಡಿ ವೈದ್ಯಾಧಿಕಾರಿ ಡಾಕ್ಟರ ಸತೀಶ ತಿಳಿಸಿದ್ದಾರೆ.

<><><>

**ಭಾರತೀಯ ಜ್ಞಾನ ಪರಂಪರೆ ಕುರಿತಾದ,** ಜ್ಞಾನವರ್ಧಕ ಪ್ರದರ್ಶನ, ರಾಮನಗರ ಜಿಲ್ಲೆ, ಕನಕಪುರ ತಾಲೂಕು, ಸಂಗಮ ಸಮೀಪದ, ಓಂ ಶಾಂತಿಧಾಮ ಗುರುಕುಲದಲ್ಲಿ ಜರುಗಿತು. ಶ್ರೀ ಆರ್ಯ ಮುನಿ ಸಂಸ್ಥೆಯ ಅಧ್ಯಕ್ಷ ಪ್ರಮೋದ್ ಜೀ, ಚಾಲನೆ ನೀಡಿದರು.

<><><>

**ಸಾರ್ವಜನಿಕರು ರಸ್ತೆ ಬದಿಗೆ,** ಕಸ ಎಸೆಯದೇ, ನಿಗದಿತ ಸ್ಥಳಗಳಲ್ಲಿ ಮಾತ್ರ ತ್ಯಾಜ್ಯ ವಿಲೇವಾರಿ ಮೂಲಕ, ನಗರ ಸ್ವಚ್ಛತೆ ಕಾಪಾಡಲು ಸಹಕರಿಸಬೇಕು ಎಂದು, ಬೆಂಗಳೂರು, ಕೇಂದ್ರ ನಗರ ಪಾಲಿಕೆ ಆಯುಕ್ತ, ರಾಜೇಂದ್ರ ಚೋಳನ್ ಮನವಿ ಮಾಡಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>